<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ದಕ್ಷಿಣ ಕನ್ನಡ, ಮಂಗಳೂರು</u>

<u>ಸೆಷನ್ಸ್ ಕೇಸ್ ನಂಬ್ರ 34/2020</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಫ್ರಾನ್ಸಿಸ್ ಪಿ.ಜೆ | <u>ಪ್ರಾಸಾಃ 41</u> |
| ತಂದೆಯ ಹೆಸರು | : | ಜೋಸೆಫ್ | <u>ಚಾಸಾಃ 52</u> |
| ಪ್ರಾಯ | : | 63 ವರ್ಷ | ದಿನಾಂಕಃ 20.06.2024 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | Retd. Chief Manager, South Indian Bank | |
| ವಾಸಸ್ಥಳ | | ಕಣ್ಣೂರು, ಕೇರಳ. | |

<u>**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**</u>

ನಾನು ಏಪ್ರಿಲ್ 2008 ರಿಂದ ಮಾರ್ಚ್ 2011 ವರೆಗೆ ಮಂಗಳೂರಿನ ಸೌತ್ ಇಂಡಿಯನ್ ಬ್ಯಾಂಕ್, ಹಂಪನಕಟ್ಟ ಶಾಖೆಯಲ್ಲಿ ಚೀಫ್ ಮೆನೇಜರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಆ ಸಮಯದಲ್ಲಿ ಉಳ್ಳಾಲ ಪೊಲೀಸರು ದಿನಾಂಕಃ 04.12.2008 ರಂದು ಖಾತೆ ನಂಬ್ರ 61192 ಮತ್ತು ಖಾತೆ ನಂಬ್ರ 4973 ಕ್ಕೆ ಸಂಬಂಧಪಟ್ಟಂತೆ ವಹಿವಾಟನ್ನು ಸ್ಥಗಿತಗೊಳಿಸುವಂತೆ ಬರೆದಿದ್ದ ಎರಡು ಪತ್ರಗಳನ್ನು ಗುರುತಿಸುತ್ತೇನೆ. ಅವುಗಳನ್ನು ಮೂಲ ಪ್ರಕರಣದಲ್ಲಿ ನಿ.ಪಿ-66 ಮತ್ತು ನಿ.ಪಿ-67 ಎಂದು ಗುರುತಿಸಲಾಗಿದ್ದು, ಈ ಪ್ರಕರಣದಲ್ಲಿ ನಿ.ಪಿ.59 ಮತ್ತು ನಿ.ಪಿ.60 ಎಂದು ಗುರುತಿಸಲಾಯಿತು. ನಾನು ಸದರಿ ಪತ್ರಗಳಿಗೆ ದಿನಾಂಕಃ 15.12.2008 ರಂದು ಉತ್ತರವನ್ನು ನೀಡಿದ್ದು ಸೈಯದ್ ಮಹಮ್ಮದ್ ನೌಶಾದ್ ಗೆ ಸೇರಿದ ಕ್ರೌನ್ ಕಾರ್ಪೊರೇಷನ್ ಸಂಬಂಧಪಟ್ಟ ಅಕೌಂಟ್ ನಂಬ್ರ 61192 ಕ್ಕೆ ಸಂಬಂದಿಪಟ್ಟಂತೆ ಪತ್ರ ಬರೆದು ಮಹಮ್ಮದ್ ನೌಶಾದ್‌ನ್ ಫೋಟೋ, ಪಾನ್ ಕಾರ್ಡ್, ಚುನಾವಣಾ ಗುರುತಿನ ಚೀಟಿಯ ಜೆರಾಕ್ಸ್ ಕಾಪಿಗಳನ್ನು ಮತ್ತು ಸ್ಟೇಟ್ ಮೆಂಟ್ ಆಫ್ ಅಕೌಂಟ್ಸ ನ್ನು ಕಳಿಸಿದ್ದು, ಸದರಿ ಪತ್ರವನ್ನು ಮೂಲ ಪ್ರಕರಣದಲ್ಲಿ ನಿ.ಪಿ-68 ಎಂದು ಗುರುತಿಸಲಾಗಿದ್ದು, ಈ ಪ್ರಕರಣದಲ್ಲಿ ನಿ.ಪಿ.61 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.61(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಅಕೌಂಟು ನಂಬ್ರ 4973 ಮಹಮ್ಮದ್ ಆಲಿ ಎಂಬುವವರ ಹೆಸರಿನಲ್ಲಿದ್ದು, ಅದಕ್ಕೆ ಸಂಬಂದಪಟ್ಟಂತೆ ಪತ್ರ ಬರೆದು ಸ್ಟೇಟ್ ಮೆಂಟ್ ಆಫ್ ಅಕೌಂಟನ್ನು ಕಳಿಸಿರುತ್ತೇನೆ. ಅದನ್ನು ಮೂಲ

ಪ್ರಕರಣದಲ್ಲಿ ನಿ.ಪಿ-69 ಎಂದು ಗುರುತಿಸಲಾಗಿದ್ದು, ಈ ಪ್ರಕರಣದಲ್ಲಿ ನಿ.ಪಿ.62 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.62(ಎ) ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ 10 ನೇ ಆರೋಪಿಯ ಪರ ಶ್ರೀ ಎಸ್.ಆರ್.ಎಫ್. ವಕೀಲರಿಂದಃ-</u>**

ಪಾಟೀ ಸವಾಲು ಏನು ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.